ಆಧಾರದ ಮೇಲೆ ವಹಿಸಲು ಸರ್ಕಾರವು ನಿರ್ಧರಿಸಿತ್ತು. ಈ ದಿಸೆಯಲ್ಲಿ ಒಂದು ಟೆಂಡರ್ ಸಮಿತಿಯನ್ನು ಸರ್ಕಾರದವರು ದಿನಾಂಕ : 21–6–1990ರಲ್ಲಿ ರಚಿಸಿದರು. ಈ ಸಮಿತಿಯು ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದೆ. ಸಮಿತಿಯ ವರದಿ ಪರಿಶೀಲಿಸಿದ್ದಲ್ಲಿ ಖಾಸಗಿ ಸಂಸ್ಥೆಗಳಿಗೆ ಗುತ್ತಿಗೆ ಆಧಾರದ ಮೇಲೆ ವಹಿಸಿದ್ದಲ್ಲಿ ಕೆಲವು ತೊಂದರೆ ತೊಡಕುಗಳು ಬರುವುದನ್ನು ಗಮನಿಸಲಾಗಿದೆ. ಖಾಸಗಿ ಸಂಸ್ಥೆಗಳಿಗೆ ರಿಯಾಯಿತಿ ನೀಡಬೇಕಾಗುತ್ತದಲ್ಲದೆ ಸದರಿ ಘಟಕಗಳ ಬೆಲೆ ಬಾಳುವ ಯಂತ್ರಗಳು ಗುತ್ತಿಗೆ ಅವಧಿಯಲ್ಲಿ ಖಾಸಗಿಯವರು ಚೆನ್ನಾಗಿ ನಡೆಸಿಕೊಂಡು ಹೋಗುತ್ತಾರೋ ಇಲ್ಲವೋ ಎಂಬ ಶಂಕೆ ಇದೆ. ಇದಲ್ಲದೆ ಈ ಗುತ್ತಿಗೆ ನೀಡುವ ನಿರ್ಧಾರವು ಸಹಕಾರ ಅಂಧೋಲನದ ನೀತಿಗೆ ತದ್‌ವಿರುದ್ಧವಾಗುತ್ತದೆ. ಆದ್ದರಿಂದ ಸರ್ಕಾರವು ಈ ರೋಗಗ್ರಸ್ತ ಘಟಕಗಳನ್ನು ಪುನರಾರಂಭಿಸಲು ಪರ್ಯಾಯ ವ್ಯವಸ್ಥೆಯನ್ನು ಮಾಡುವ ಸಾಧ್ಯಾಸಾಧ್ಯತೆಯನ್ನು ಪರಿಶೀಲಿಸುತ್ತಿದೆ. ಮೊನ್ನೆ ಮೀಟಿಂಗ್ ಕರೆದು ಆಲೋಚನೆ ನಡೆಸಿದೆ. ತೀವ್ರವೇ ಈ ಹಿನ್ನೆಲೆಯಲ್ಲಿ ಒಂದು ನಿರ್ಣಯಕ್ಕೆ ಬರಲಿದೆ.

(5) ಹಾಸನ ನಗರದಲ್ಲಿ ಕುಡಿಯುವ ನೀರಿನ ಸೌಕರ್ಯ ಒದಗಿಸುವುದು.

ಶ್ರೀ ಕೆ.ಹೆಚ್. ಹನುಮೇಗೌಡ :– ಮಾನ್ಯ ಅಧ್ಯಕ್ಷರೇ, ಹಾಸನ ಸಿಟಿಯ (1) ಬೇರನಹಳ್ಳಿ ಬಡಾವಣೆ (2) ಬಸೆಟ್ಟಿಕೊಪ್ಪಲು (3) ಚೆಕ್ಕನಾಳ ಮತ್ತು (4) ವಿದ್ಯಾನಗರಗಳಲ್ಲಿ ಕುಡಿಯುವ ನೀರಿನ ತೊಂದರೆ ಇರುವ ಬಗ್ಗೆ ಸರ್ಕಾರದ ಗಮನಕ್ಕೆ ತಂದಿದ್ದರ ಫಲವಾಗಿ ಹಾಸನ ಸಿಟಿಯ ಈ ಬಡಾವಣೆಗಳ ನೀರಿನ ಬವಣೆಯನ್ನು ನಿವಾರಿಸಲು ಸರ್ಕಾರದ ಐದು ಲಕ್ಷ ರೂಪಾಯಿಗಳನ್ನು ಹಾಸನದ ಜಿಲ್ಲಾಧಿಕಾರಿಗಳಿಗೆ ಕಳುಹಿಸಿಕೊಟ್ಟಿದ್ದು ಈ ಹಣವನ್ನು ಹಾಸನ ಜಿಲ್ಲಾಧಿಕಾರಿಗಳು ಹಾಸನ ಮುನಿಸಿಪಾಲಿಟಿಗೆ ಬಿಡುಗಡೆ ಮಾಡಿರುತ್ತಾರೆ. ಹಾಸನ ಮುನಿಸಿಪಾಲಿಟಿಯವರು ಈ ಬಗ್ಗೆ ಇದುವರೆವಿಗೂ ಯಾವ ಕಾರ್ಯಕ್ರಮವನ್ನು ತೆಗೆದುಕೊಂಡಿಲ್ಲ. ಜನರ ಕುಡಿಯುವ ನೀರಿನ ತೊಂದರೆಯು ಬಗೆಹರಿದಿರುವುದಿಲ್ಲ. ಈ ಕಾರಣ ಸರ್ಕಾರ ಹಾಸನ ಮುನಿಸಿಪಾಲಿಟಿಯವರಿಗೆ ಆದೇಶ ನೀಡಿ ಮೇಲೆ ನಮೂದಿಸಿರುವ ಪ್ರದೇಶಗಳ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಲು ಮಿನಿವಾಟರ್ ಸಪ್ಲೈ ಸ್ಕೀಂಗಳನ್ನು ತಕ್ಷಣ ಮಾಡುವಂತೆ ಆದೇಶ ನೀಡಬೇಕೆಂದು ಮಾನ್ಯ ನಗರಾಭಿವೃದ್ಧಿ ಸಚಿವರಿಗೆ ಬಿನ್ನವಿಸಿಕೊಳ್ಳುತ್ತೇನೆ.

ಶ್ರೀ ಬಿ. ಶಿವಮೂರ್ತಿ (ನಗರಾಭಿವೃದ್ಧಿ ಸಚಿವರ ಪರವಾಗಿ) :– ಮಾನ್ಯ ಅಧ್ಯಕ್ಷರೇ, ಹಾಸನ ನಗರದ ಬೀರನಹಳ್ಳಿ ಬಡಾವಣೆ ಬಸೆಟ್ಟಿಕೊಪ್ಪಲು, ಚೆಕ್ಕನಾಳ ಈ ಮೂರು ಬಡಾವಣೆಗಳು ಮಾತ್ರ ನಗರಸಭೆಯ ವ್ಯಾಪ್ತಿಯಲ್ಲಿ ಸೇರಿದ್ದು ಈ ಬಡಾವಣೆಗಳ ಪೈಕಿ ಬೀರನಹಳ್ಳಿ ಬಡಾವಣೆಯಲ್ಲಿ ಈಗಾಗಲೇ 4 ಸಾವಿರ ಗ್ಯಾಲನ್ ಪ್ರತಿ ಗಂಟೆಗೆ ನೀರು ಬರುವಂತಹ (1) ಬೋರ್‌ವೆಲ್‌ಗಳನ್ನು ಕೊರೆಸಲಾಗಿದ್ದು ಅದಕ್ಕೆ ವಿದ್ಯುತ್ ಪಂಪನ್ನು ಅಳವಡಿಸಲು ಪಂಪನ್ನು 29,000–00 ರೂ.ಗಳ ಖರ್ಚಿನಲ್ಲಿ ಖರೀದಿಸಲಾಗಿದೆ ಶೀಘ್ರದಲ್ಲಿಯೇ ಪಂಪನ್ನು ಅಳವಡಿಸಿ ಅಲ್ಲಿಯ ಜನರ ನೀರಿನ ಸಮಸ್ಯೆಯನ್ನು ಬಗೆಹರಿಸಲಾಗುವುದು. ಬಸೆಟ್ಟಿಕೊಪ್ಪಲು ಮತ್ತು ಚೆಕ್ಕನಾಳು ಬಡಾವಣೆಗಳಲ್ಲಿ ಹೊಸದಾಗಿ ಬೋರ್‌ವೆಲ್‌ಗಳನ್ನು ಕೊರೆಯಿಸುವ ವ್ಯವಸ್ಥೆ ಮಾಡಲಾಗಿದ್ದು ಅವುಗಳಿಂದ ವಿದ್ಯುತ್ ಪಂಪಗಳನ್ನು ಅಳವಡಿಸಿ ಈ ಬಡಾವಣೆಗಳ ಜನರ ನೀರಿನ ಬವಣೆಯನ್ನು ಪರಿಹರಿಸಲಾಗುವುದು.

ವಿದ್ಯಾನಗರ ಬಡಾವಣೆಯು ನಮ್ಮ ನಗರಸಭೆಯ ವ್ಯಾಪ್ತಿಯೊಳಗೆ ಬರುವುದಿಲ್ಲ ಈ ಬಡಾವಣೆಗಳಲ್ಲದೆ ನಗರದ ಇತರ ಕ್ಷೇತ್ರಗಳಲ್ಲಿ ಇರುವ 8 ಬೋರ್‌ವೆಲ್‌ಗಳಿಗೆ ಪಂಪ್‌ಗಳನ್ನು ಕೊಡಿಸಲು 2,47,000–00 ರೂ.ಗಳನ್ನು ಖರ್ಚು ಮಾಡಲಾಗಿದೆ. ಇನ್ನೂಳಿದ 2,24,000–00 ರೂ.ಗಳನ್ನು ನಗರಸಭೆಯ ವ್ಯಾಪ್ತಿಯಲ್ಲಿ ಬರುವ ಕ್ಷೇತ್ರದ ಪೈಕಿ ನೀರು ತೊಂದರೆಯನ್ನು ಅನುಭವಿಸುತ್ತಿರುವ ಕ್ಷೇತ್ರಗಳಲ್ಲಿ ನೀರನ್ನು ಒದಗಿಸುವ ಬಗ್ಗೆ ಖರ್ಚು ಮಾಡಲಾಗುವುದು.

(6) ಕುಬ್ಜಾ ನದಿಯ ಕೆಂಡಿ ಆಣೆಕಟ್ಟು ದುರಸ್ತಿಯ ಬಗ್ಗೆ.

ಶ್ರೀ ಜಿ.ಎಸ್. ಆಚಾರ್ (ಬೈಂದೂರ್) :– ಮಾನ್ಯ ಅಧಕ್ಷರೇ, ಕುಬ್ಜಾ ನದಿಯ ಕೆಂಡಿ ಆಣೆಕಟ್ಟು ದುರಸ್ತಿ ಕುರಿತು ಹೇಳುವುದಾದರೆ, ದಕ್ಷಿಣ ಕನ್ನಡ ಜಿಲ್ಲೆಯ ಅನೇಕ ನದಿ, ತೊರೆಗಳಿಗೆ ಅಡ್ಡಲಾಗಿ ಕಟ್ಟಿದ ಕೆಂಡಿ ಅಣೆಕಟ್ಟುಗಳು, SHRI SUBHASH S. JOSHI: In Chikodi Taluk, one of the Villages, Bedka,

ಉಪ್ಪು ನೀರು ತಡೆ ಗಟ್ಟುಗಳು ಹಾಳಾಗಿವೆ. ಹಾಕಿದ ಹಲಗೆಗಳು ನಾಪತ್ತೆ ಆಗಿವೆ. ಕಲ್ಲು ಕಟ್ಟಡ, ಕಾಂಕ್ರೀಟು ಒಡೆದು ನೀರು ಸೋರುತ್ತಿದೆ. ಅನೇಕ ವರ್ಷಗಳಿಂದ ದುರಸ್ತಿ ಆಗಿಲ್ಲ. ಅದರ ಸಲುವಾಗಿ ಸಮರ್ಪಕ ಪರಿಶೀಲನೆ ನಡೆಸಿ, ಸಮಗ್ರ ಯೋಜನೆ ತಯಾರಿಸಿ, ಕಾರ್ಯರೂಪಕ್ಕೆ ತರಬೇಕು.

ಕುಂದಾಪುರ ತಾಲ್ಲೂಕಿನಲ್ಲಿ ಕುಬ್ಜಾ ನದಿಗೆ ಅಡ್ಡಲಾಗಿ ಲಕ್ಷಾಂತರ ರೂಪಾಯಿಗಳ ವೆಚ್ಚದಿಂದ ಕಟ್ಟಲಾದ ಕೆಂಡಿ ಅಣೆಕಟ್ಟು ಇತ್ತೀಚೆನ ವರ್ಷಗಳಲ್ಲಿ ನೆರೆ ಹಾವಳಿಯಿಂದ ತೀರ ಹಾಳಾಗಿದೆ. ಅಣೆಕಟ್ಟಿನ ಎರಡೂ ಬದಿಗಳು ಕೊರೆದು ಹೋಗಿವೆ. ಅಣೆಕಟ್ಟು ನದಿಯ ಮಧ್ಯ ದ್ವೀಪದಂತೆ ಒಂದು ಕಾಲದ ನೀರಾವರಿ ಸವಲತ್ತಿನ ಭಗ್ನಾವಶೇಷದಂತೆ ನಿಂತಿದೆ, ನೂರಾರು ಎಕರೆ ಭೂಮಿಗೆ ನೀರಿಲ್ಲ. ರೈತರ ಜಮೀನು ಪ್ರವಾಹದಿಂದ ಕೊರೆಯುತ್ತಿದೆ. ನೀರಿಲ್ಲದೆ ಸೊರಗುತ್ತಿರುವ ಸಾರ್ವಜನಿಕ ಅರ್ಜಿಗಳು ಕಸದ ಬುಟ್ಟಿ ಸೇರುತ್ತಿವೆ ಎಂದು ಜನ ಆಡಿಕೊಳ್ಳುತ್ತಿದ್ದಾರೆ. ಜಿಲ್ಲಾ ಪರಿಷತ್ತಿಗೆ ನೀಡಲಾದ ದುರಸ್ತಿ ಹಣ ಅತ್ಯಲ್ಪ. ಈ ವಿಚಾರ ತುರ್ತು ಗಮನ ಹರಿಸಿ, ಸಮರೋಪಾದಿ ಯೋಜನೆ, ಕಾರ್ಯನಿರ್ವಹಣೆ ಆಗಬೇಕೆಂದು ಸರ್ಕಾರವನ್ನು ಆಗ್ರಹ ಪೂರ್ವಕವಾಗಿ ಒತ್ತಾಯಿಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು):–

ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು 320 ಕೆಂಡಿ ಅಣೆಕಟ್ಟುಗಳು ಮತ್ತು 55 ಉಪ್ಪು ನೀರು ತಡೆ ಅಣೆಕಟ್ಟುಗಳು ಇವೆ. ಇವುಗಳ ವಿವರ ಕೆಳಕಂಡಂತಿದೆ.

ಕ್ರಮ ಸಂಖ್ಯೆ	ವಿವರ	ಒಟ್ಟು ಕಾಮಗಾರಿಗಳ ಸಂಖ್ಯೆ	ಕಾರ್ಯನಿರ್ವಹಿಸುತ್ತಿರುವ ಕಾಮಗಾರಿಗಳ ಸಂಖ್ಯೆ	ನಾದುರಸ್ತಿಯಲ್ಲಿರುವ ಕಾಮಗಾರಿಗಳ ಸಂಖ್ಯೆ	ದುರಸ್ತಿಗೆ ಬೇಕಾದ ಅಂದಾಜು ಹಣ ಲಕ್ಷ ರೂ.ಗಳಲ್ಲಿ
1.	ಕೆಂಡಿ ಅಣೆಕಟ್ಟುಗಳು	320	141	179	100.00
2.	ಉಪ್ಪು ನೀರು ತಡೆ ಅಣೆಕಟ್ಟುಗಳು	55	49	6	35.00
	ಒಟ್ಟು	375	190	185	135.00

320 ಕೆಂಡಿ ಅಣೆಕಟ್ಟುಗಳ ಪೈಕಿ 1 ಕೆಂಡಿ ಅಣೆಕಟ್ಟು ಸಣ್ಣ ನೀರಾವರಿ ವಲಯದ ವ್ಯಾಪ್ತಿಯಲ್ಲಿದ್ದು ಉಳಿದ 319 ಕೆಂಡಿ ಅಣೆಕಟ್ಟುಗಳು ಜಿಲ್ಲಾ ಪರಿಷತ್ ವ್ಯಾಪ್ತಿಯಲ್ಲಿ ಬರುತ್ತದೆ. 55 ಉಪ್ಪು ನೀರು ತಡೆ ಅಣೆಕಟ್ಟುಗಳ ಪೈಕಿ 6 ಸಣ್ಣ ನೀರಾವರಿ ವಲಯದ ವ್ಯಾಪ್ತಿಯಲ್ಲಿದ್ದು, ಉಳಿದ 49 ಅಣೆಕಟ್ಟುಗಳು ಜಿಲ್ಲಾ ಪರಿಷತ್ ವ್ಯಾಪ್ತಿಯಲ್ಲಿ ಬರುತ್ತವೆ.

ಮೇಲ್ಕಂಡ 375 ಅಣೆಕಟ್ಟುಗಳ ಪೈಕಿ 185 ಅಣೆಕಟ್ಟುಗಳು ದುರಸ್ತಿ ಆಗಬೇಕಾಗಿದ್ದು, ಇವುಗಳ ದುರಸ್ತಿಗೆ ಸುಮಾರು 135.00 ಲಕ್ಷ ರೂ. ಬೇಕಾಗುತ್ತದೆ. ಈ ಮೇಲ್ಕಂಡ ಅಣೆಕಟ್ಟುಗಳು ಹಲವಾರು ವರ್ಷಗಳಿಂದ ನಾದುರಸ್ತಿಯಲ್ಲಿದ್ದು, ಸೂಕ್ತ ಅನುದಾನ ದೊರೆತಿಲ್ಲವಾದ್ದರಿಂದ ದುರಸ್ತಿ ಕಾರ್ಯಗಳನ್ನು ಕೈಗೊಳ್ಳಲು ಸಾಧ್ಯವಾಗಿಲ್ಲ.

ಕುಂದಾಪುರ ತಾಲ್ಲೂಕಿನಲ್ಲಿ ಕುಬ್ಜ ನದಿಗೆ ಅಡ್ಡಲಾಗಿ ಕಟ್ಟಿರುವ ಕೆಂಡಿ ಅಣೆಕಟ್ಟು ಜಿಲ್ಲಾ ಪರಿಷತ್ ಇಂಜಿನಿಯರಿಂಗ್ ವಿಭಾಗ, ಉಡುಪಿ ಇವರಿಗೆ ಸಂಬಂಧಪಡುವುದರಿಂದ ಇದರ ಬಗ್ಗೆ ಸ್ಥಳ ಪರಿವೀಕ್ಷಣೆ ನಡೆಸಿ ಇದನ್ನು ದುರಸ್ತಿ ಮಾಡಲು ಮುಂದಿನ ಕ್ರಮ ತೆಗೆದುಕೊಳ್ಳಲು ಕಾರ್ಯಪಾಲಕ ಇಂಜಿನೀಯರ್, ಜಿಲ್ಲಾ ಪರಿಷತ್ ಇಂಜಿನೀಯರಿಂಗ್ ವಿಭಾಗ, ಉಡುಪಿ ಇವರಿಗೆ ಸೂಚಿಸಲಾಗಿದೆ.

there are atrocities on dalits for the last 2 months. About 1000 dalits are boycotted for the last two months. The police have not given any protection. One person was also killed in police firing. Several times they informed to the police. The police are not giving any protection and the local people who are unfortunately the congress workers, are against the dalits harijans. Therefore, I request the Hon.Minister to pay attention towards Bedka village because for the last two months they have been boycotted and they have been without any employment.

ಶ್ರೀ ಧರ್ಮಸಿಂಗ್ :– ಮಾನ್ಯ ಅಧ್ಯಕ್ಷರೇ, ಇದರಲ್ಲಿ ಅಂಥಾದ್ದು ಏನೂ ಇಲ್ಲ. ಆದರೂ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ನಾನು ಅದನ್ನು ನೋಟ್ ಮಾಡಿಕೊಂಡಿದ್ದೇನೆ. ನಾನು ಡಿ.ಐ.ಜಿ. ಅವರಿಗೆ ಹೇಳಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

SHRI SUBHASH S. JOSHI:- Hon'ble Speaker, Sir..

MR. CHAIRMAN:- You have brought to the notice of the Government. They will take notice.

SHRI SUBHASH S. JOSHI:- They do not know the particulars.

SHRI DHARM SINGH:- Just now you have mentioned I will take notice.

ಶ್ರೀ ಗೋಪೀನಾಥ ಆರ್ ಸಾಂಡ್ರ:– ಅಧ್ಯಕ್ಷರೇ, ಶಾಸಕರ ಭವನದಲ್ಲಿ ಶಾಸಕರಿಗೆ ಬಹಳ ತೊಂದರೆಯಾಗುತ್ತಿದೆ. ಕಾರುಗಳು ಇಲ್ಲವೆಂದು ಹೇಳುತ್ತಾರೆ. ಏತಕ್ಕೆ ಇಲ್ಲವೆಂದು ಕೇಳಿದರೆ, ಪೆಟ್ರೋಲ್ ಇಲ್ಲವೆಂದು ಹೇಳುತ್ತಾರೆ.

ಸಭಾಧ್ಯಕ್ಷರು :– ತಾವು ಇದರ ಬಗ್ಗೆ ಸ್ವೀಕರ್‌ರವರಿಗೆ ಬರೆದು ಕಳುಹಿಸಿ..

ಶ್ರೀ ಗೋಪೀನಾಥ ಆರ್. ಸಾಂಡ್ರ : ಇದು ಜೀರೋ ಅವರ್.

ಸಭಾಧ್ಯಕ್ಷರು :– ನೀವು ಬರೆದು ಕಳುಹಿಸಿ.

ಶ್ರೀ ಗೋಪೀನಾಥ ಆರ್. ಸಾಂಡ್ರ :– ಶಾಸಕರ ಭವನದಲ್ಲಿ ಯಾವುದಾದರೂ ಫೋನ್ ಕೆಲಸ ಮಾಡುತ್ತಿದೆಯೇ? ಫೋನ್ ಇಲ್ಲ, ಕಾರು ಸಿಗುತ್ತಿಲ್ಲ.

ಶ್ರೀ ಬಿ.ಎಂ. ಇದಿನಬ್ಬ :– ಇದರ ಬಗ್ಗೆ ಅನೇಕ ಬಾರಿ ಹೇಳಿದ್ದೇವೆ. ಶಾಸಕರಿಗೆ ವ್ಯವಸ್ಥೆ ಸರಿಯಾಗಿ ಮಾಡುತ್ತಿಲ್ಲ, ದೂರದ ಊರುಗಳಿಂದ ಬಂದ ಶಾಸಕರಿಗಂತೂ ಬಹಳ ತೊಂದರೆಯಾಗುತ್ತಿದೆ.

ಶ್ರೀ ಗೋಪಿನಾಥ ಆರ್. ಸಾಂಡ್ರ :– ದೂರದ ಊರುಗಳಿಂದ ಬಂದಂಥ ಶಾಸಕರಿಗೆ ಬಹಳ ತೊಂದರೆಯಾಗುತ್ತಿದೆ. ಈ ಶಾಸಕರ ಭವನ ತೊಂದರೆಗಳ ತವರೂರಾಗಿದೆ. ನಾವು ಶಾಸನ ಸಭೆಯನ್ನು ಟೈಮ್‌ಗೆ ಸರಿಯಾಗಿ ಅಟೆಂಡ್ ಮಾಡಬೇಕಾಗುತ್ತದೆ, ಕೆಲವೊಮ್ಮೆ ಮಂತ್ರಿಗಳನ್ನು ಭೇಟಿ ಮಾಡಬೇಕಾಗುತ್ತದೆ. ಕಾರ್ ಕೇಳಿದರೆ ಪೆಟ್ರೋಲ್ ಇಲ್ಲ, ಟ್ಯಾಕ್ಸ್ ಕಟ್ಟಿಲ್ಲ ಇತ್ಯಾದಿಯಾಗಿ ಹೇಳುತ್ತಾರೆ. ಶಾಸಕರಿಗೆ ಊಟದ ವ್ಯವಸ್ಥೆಯೂ ಸರಿಯಾಗಿಲ್ಲ. ಆದುದರಿಂದ ಶಾಸಕರಿಗೆ ಅನುಕೂಲ ಮಾಡಿಕೊಡುವ ದೃಷ್ಟಿಯಿಂದ ಈ ತೊಂದರೆಗಳನ್ನು ನಿವಾರಿಸಬೇಕು.

ಸಭಾಧ್ಯಕ್ಷರು :– ನೀವು ಸ್ವೀಕರ್‌ಗೆ ಬರೆದು ಕಳುಹಿಸಿ ಇಲ್ಲವೇ ಅವರನ್ನು ಭೇಟಿಯಾಗಿ ನಿಮ್ಮ ಸಮಸ್ಯೆಗಳ ಬಗ್ಗೆ ಹೇಳಿಕೊಳ್ಳಿ.

ಶ್ರೀ ಬಿ.ಎಂ. ಇದಿನಬ್ಬ :– ಕಾರ್ ಇಲ್ಲ, ರಿಕ್ಷಾ ಸಿಗುವುದಿಲ್ಲ, ಹೀಗಾದರೆ ಹೇಗೆ? ಎಷ್ಟೋ ಬಾರಿ ಬೇರೆ ಊರುಗಳಿಂದ ಬಂದ ಶಾಸಕರು ಸಮಯಕ್ಕೆ ಸರಿಯಾಗಿ ತಮ್ಮ ಊರುಗಳಿಗೆ ಹೋಗಲಾರದೆ ಇಲ್ಲೇ ಉಳಿದುಕೊಂಡಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ :– ಸನ್ಮಾನ್ಯ ಅಧ್ಯಕ್ಷರೆ, ನಾನು ಈಗಾಗಲೇ ಒಂದು ನೋಟೀಸನ್ನು ಕಳುಹಿಸಿದ್ದೇನೆ. ರಾಜ್ಯದಲ್ಲಿ ಡಿ.ಎಲ್.ಆರ್.ಸಿ.ಯನ್ನು ಸಸ್ಪೆಂಡ್ ಮಾಡಲಾಗಿದೆ ಡಿ.ಎಲ್.ಆರ್.ಸಿ.ಯನ್ನು ಸಸ್ಪೆಂಡ್ ಮಾಡಿದ್ದರ ಬಗ್ಗೆ ನಾನು ಟೆಲಿಗ್ರಾಮ್ ಕಳುಹಿಸಿದ್ದಕ್ಕೆ, ಉತ್ತರವಾಗಿ ಡಿ.ಎಲ್.ಆರ್.ಸಿ.ಯನ್ನು ಸಸ್ಪೆಂಡ್ ಮಾಡಲಾಗಿದೆ, ಬದಲಾಗಿ ಮೂರು ಜನರ ಸಮಿತಿಯೊಂದನ್ನು ಮಾಡಲಾಗಿದೆ, Until further orders, DLRC work is suspended ಎಂದು ತಿಳಿಸಿದ್ದಾರೆ. ಆದುದರಿಂದ, ಇದರ ಬಗ್ಗೆ ಸರ್ಕಾರದ ವತಿಯಿಂದ ಒಂದು ನಿರ್ದಿಷ್ಟವಾದ ಉತ್ತರವನ್ನು ಕೇಳುತ್ತೇನೆ. ಸಾವಿರಾರು ಶಿಕ್ಷಕರು ನೇಮಕ ಮಾಡದೇ ಇರತಕ್ಕ ಸಂದರ್ಭದಲ್ಲಿ ಈ ಮೂರು ಜನರ ಸಮಿತಿ ಮಾಡಿ, ಡಿ.ಎಲ್.ಆರ್.ಸಿ.ಯ ವರ್ಕನ್ನು ಸಸ್ಪೆಂಡ್ ಮಾಡುವ ಬಗ್ಗೆ ಸರ್ಕಾರ ಆದೇಶ ಕೊಟ್ಟಿದೆ. ಇದರ ಬಗ್ಗೆ ಸರ್ಕಾರದ ನಿಲುವು ಏನೆಂದು ತಿಳಿಯಬಯಸುತ್ತೇನೆ.

ಅಧ್ಯಕ್ಷರು :– ಇದರ ಬಗ್ಗೆ ಶಿಕ್ಷಣ ಮಂತ್ರಿಗಳು ಸಭೆಗೆ ಬಂದಾಗ ಮಾತನಾಡಿ. ಜೀರೋ ಅವರ್ ಆದಮೇಲೆ ಅವಕಾಶವಿಲ್ಲ.

ಶ್ರೀ ಪಿ.ಜಿ.ಆರ್ ಸಿಂಧ್ಯ :– ಈ ಸರ್ಕಾರದವರು ಜಿಲ್ಲಾ ಪರಿಷತ್ತಿನ ಆಕ್ಟನ್ನು ಅಮೆಂಡ್ ಮಾಡಿ ಹೊಸದಾಗಿ ಮಾಡಬೇಕೆಂದು ಹೊರಟ್ಟಿದ್ದಾರೆ. ರಾಜ್ಯದಲ್ಲಿ ಬಹಳಷ್ಟು ಪ್ರೈಮರಿ ಸ್ಕೂಲ್ ಸ್ಯಾನಿಟೇಷನ್ ವೆಕನ್ಸೀಸ್ ಇದೆ. ಅಪ್ಲಿಕೇಷನ್ ಹಾಕಿ, ಬಸ್ ಟಾರ್ಜ್ ಖರ್ಚುಮಾಡಿಕೊಂಡು ಕೆಲಸ ಸಿಕ್ಕದೆ, ಜನರು ಕಂಗಾಲಾಗಿದ್ದಾರೆ. ಇದರ ಬಗ್ಗೆ ಸರ್ಕಾರ ಉತ್ತರ ಕೊಡದಿದ್ದರೆ ಹೇಗೆ? ಸಭೆಯಲ್ಲಿ ಮಾನ್ಯ ಕೆ.ಹೆಚ್. ಪಾಟೀಲರಿದ್ದಾರೆ, ಧರ್ಮಸಿಂಗ್‌ರವರಿದ್ದಾರೆ, ಇವರುಗಳು ಈ ವಿಷಯಗಳನ್ನು ಗಮನಕ್ಕೆ ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ಜೀರೋ ಅವರ್‌ನಲ್ಲಿ ಪ್ರಸ್ತಾಪ ಮಾಡುತ್ತಿದ್ದೇನೆ. ನಾನು ಟೆಲಿಗ್ರಾಮ್ ಕೊಟ್ಟಿರುವುದು ನಿಜ, ಡಿ.ಎಲ್.ಆರ್.ಸಿ. ಕಮಿಟಿಯ ಕೆಲಸ ಸ್ಥಗಿತವಾಗಿದೆ.

ಅಧ್ಯಕ್ಷರು : ಇದನ್ನು ತಾವು ಸರ್ಕಾರದ ಗಮನಕ್ಕೆ ತಂದಿರುವಿರೇ?

ಶ್ರೀ ವಿ. ನಾಗರಾಜ್ :– ರದ್ದು ಮಾಡುವುದಕ್ಕೆ ಕಾರಣವೇನು? ಇದು ಬಹಳ ಅಪರಾದ.

ಅಧ್ಯಕ್ಷರು : ಇದರ ಬಗ್ಗೆ ಮಾನ್ಯ ಶ್ರೀ ಕೆ.ಹೆಚ್. ಪಾಟೀಲ್ ಅವರನ್ನು ಕೇಳೊಣ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ :– ಮಾನ್ಯ ಅಧ್ಯಕ್ಷರೇ, ಸರ್ಕಾರದವರು ಹೇಳಬೇಕು. ಸರ್ಕಾರದಿಂದ ಉತ್ತರ ಬರಬೇಕು. ಸರ್ಕಾರದವರು ಏನು ಹೇಳುತ್ತಾರೋ ಹೇಳಲಿ.....

(ಗೊಂದಲ)

ಶ್ರೀ ಸಿ.ಬೈರೇಗೌಡ :– ನಾನೂ ಕೂಡ ಕಳುಹಿಸಿದ್ದೇನೆ. ನಾನು ಕಳುಹಿಸಿ 1 ವಾರ ಆಯಿತು.....

ಶ್ರೀ ಕೆ.ಹೆಚ್. ಪಾಟೀಲ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರ ಮನಸ್ಸಿನ ಕಳವಳ ನಮಗೆ ಅರ್ಥವಾಗಿದೆ. ಅವರಿಗಿಂತ ಕಡಿಮೆ ಇಲ್ಲದಷ್ಟು ಚಿಂತನೆಯನ್ನು ಸರ್ಕಾರ ಮಾಡಿದೆ. ಈಗತಾನೆ ಹೊಸದಾಗಿ ಶಿಕ್ಷಣ ಸಚಿವರು ಬಂದಿದ್ದಾರೆ. ತೀವ್ರವಾಗಿ ರಿಕ್ರೂಟ್‌ಮೆಂಟ್ ಕಮಿಟಿಯನ್ನು ನೇಮಕ ಮಾಡಿ ನೇಮಕಾತಿಯನ್ನು ಮಾಡಬೇಕೆಂಬುದು ಸರ್ಕಾರದ ಧೋರಣೆಯಾಗಿದೆ. ಇದರಲ್ಲಿ ತಪ್ಪು ಮಾಡುವುದಿಲ್ಲ. ಆದ್ದರಿಂದ ಮಾನ್ಯ ಸದಸ್ಯರಲ್ಲಿ ಇಷ್ಟೊಂದು ಕಳವಳಕ್ಕೆ ಕಾರಣವಿಲ್ಲ ಎಂದು ಹೇಳಬಯಸುತ್ತೇನೆ.

(ಗೊಂದಲ)

ಶ್ರೀ ಸಿ. ಬೈರೇಗೌಡ :– ಹಾಗಾದರೆ ಇಂಥ ಸಮಿತಿಗಳನ್ನು ಏತಕ್ಕೆ ಮಾಡಿದಿರಿ?

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ :– ಕಾಲಿ ಸಮಿತಿ ಇದೆ. ಅದರಲ್ಲಿ ಜೇಫ್ ಸೆಕ್ರೆಟರಿಯವರು ಇದ್ದಾರೆ, ಸೋಷಿಯಲ್ ವೆಲ್‌ಫೇರ್ ಆಫೀಸರ್ ಇದ್ದಾರೆ. ಡಿ.ಡಿ.ಪಿ.ಐ.ರವರೂ ಇದ್ದಾರೆ.

ಶ್ರೀ ಸಿ.ಬೈರೇಗೌಡ :– ಈಗಿರತಕ್ಕ ಪರಿಸ್ಥಿತಿ ಎಂದರೆ ಸಮಿತಿ ರದ್ದಾಗಿ ಕೆಲಸ ಸ್ಥಗಿತವಾಗಿದೆ. ಗ್ರಾಮಾಂತರ ಪ್ರದೇಶದಲ್ಲಿ 100–150 ಜನ ಮಕ್ಕಳಿಗೆ ಒಬ್ಬ ಉಪಾಧ್ಯಾಯನಿದ್ದಾನೆ..... ಅಲ್ಲಿ ಮಕ್ಕಳ ವಿದ್ಯಾಭ್ಯಾಸ ಹೋಯಿತು.....

(ಗೊಂದಲ)

ಶ್ರೀ ಕೆ.ಹೆಚ್. ಪಾಟೀಲ್ :– ನಿಮಗೆ ಸರ್ಕಾರದ ಉತ್ತರದ ಅಪೇಕ್ಷೆ ಇದ್ದರೆ ನಾವು ಹೇಳುವುದನ್ನು ಕೇಳಿ. ಇಲ್ಲದಿದ್ದರೆ ನೀವು ಭಾಷಣ ಮಾಡಿ ನಾನು ಕೇಳುತ್ತೇನೆ. ಸರ್ಕಾರದವರು ಏನೋ ತಪ್ಪನ್ನು ಸಮಿತಿಯವರಿಂದ ಕಂಡುಹಿಡಿದು ಅದನ್ನು ರದ್ದುಮಾಡಿದ್ದಾರೆ. ರಿಕ್ರೂಟ್‌ಮೆಂಟ್ ಕಮಿಟಿಯನ್ನು ಮತ್ತೆ ಮಾಡಬೇಕು. ಅದನ್ನು ಮಾಡಿದನಂತರ ತೀವ್ರವಾಗಿ ಕೆಲಸ ಮಾಡುವುದಕ್ಕೆ ಆದೇಶ ಕೊಡುತ್ತದೆ. ನಿಮಗೆ ಬೇಕಾಗಿರತಕ್ಕದ್ದು ಶಿಕ್ಷಕರನ್ನು ತೀವ್ರವಾಗಿ ನೇಮಕ ಮಾಡತಕ್ಕದ್ದು. ಈ ದಿಸೆಯಲ್ಲಿ ಸರ್ಕಾರ ನಿಮಗಿಂತ ಕಡಿಮೆ ಕುತೂಹಲದಲ್ಲಿಲ್ಲ ಎಂಬುದನ್ನು ತಮಗೆ ಹೇಳಬಯಸುತ್ತೇನೆ. ತಾವು ಸಮಾಧಾನದಿಂದಿರಿ. ಈಗತಾನೆ ಹೊಸದಾಗಿ ಶಿಕ್ಷಣ ಮಂತ್ರಿಗಳು ಬಂದಿದ್ದಾರೆ. ನಾಳೆ ಸ್ಟೇಟ್‌ಮೆಂಟ್ ಮಾಡುತ್ತಾರೆ.

ಶ್ರೀ ಸಿ.ಬೈರೇಗೌಡ :– ಹಾಗಾದರೆ ನಾಳೆ ಏತಕ್ಕೆ ಮಾಡುತ್ತೀರಿ, ಇವತ್ತೇ ಮಾಡಿ.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ :– ಇಂಟರ್‌ವ್ಯೂ ಕರೆಯಬೇಕಾದರೆ 1 : 5 ಕರೆಯುತ್ತಿದ್ದೀರಿ. ಇದರ ಬದಲು 1 : 10 ಕರೆದರೆ ಬಹಳ ಜನರಿಗೆ ಅನುಕೂಲವಾಗುತ್ತದೆ.

(ಗೊಂದಲ)

ಛೇರ್ಮನ್ :– ಶಿಕ್ಷಣ ಮಂತ್ರಿಗಳು ಕೌನ್ಸಿಲ್‌ನಲ್ಲಿದ್ದಾರೆ. ಅವರು ಬಂದಕೂಡಲೇ ಉತ್ತರ ಕೊಡಿಸುತ್ತೇನೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ :– ನಮಗೆ ಸ್ಪಷ್ಟವಾದ ಉತ್ತರ ಸರ್ಕಾರದಿಂದ ಬೇಕು.

ಸಭಾಪತಿಯವರು :– ಕೊಡಿಸುತ್ತೇನೆ, ಕೂತುಕೊಳ್ಳಿ. ಈಗ ಬರಗಾಲದ ಬಗ್ಗೆ ಚರ್ಚೆ.

ನಿಗಮ 68ನ ಮೇಪೆಗೆ ಬಪಗಾಲ ಪ್ಪಸಿಹಿತಿ ಬಗ್ಗೆ ಚರ್ಚೆ

† ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ) :– ಮಾನ್ಯ ಅಧ್ಯಕ್ಷರೆ, ತಾವು ಅಧ್ಯಕ್ಷ ಪೀಠದಲ್ಲಿರುವಾಗ ಈ ರಾಜ್ಯದ ಬರಗಾಲದ ಬಗ್ಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟದ್ದಕ್ಕೆ ನಾನು ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಏಕೆಂದರೆ ತಾವು ಕೂಡ ಬರಗಾಲ ಪ್ರದೇಶದಿಂದ ಬರುತ್ತಿದ್ದೀರಿ ನಿನ್ನೆಯ ದಿವಸ ತಾವು ಈ ಚರ್ಚೆಯ ಬಗ್ಗೆ ಮಾತನಾಡುವಾಗ ಬಹಳಷ್ಟು ಸಲಹೆ ಸೂಚನೆಗಳನ್ನು ಸದನಕ್ಕೆ ಕೊಟ್ಟಿದ್ದೀರಿ. ಈ ಬರಗಾಲ ಸಮಸ್ಯೆಯ ಬಗ್ಗೆ ಸುಮಾರು ವರ್ಷಗಳಿಂದ ಪ್ರತಿಯೊಂದು ಅಧಿವೇಶನ ಸೇರಿದಾಗಲೂ ಹಲವಾರು ಸಾರಿ ಚರ್ಚೆ ಮಾಡಿದ್ದೇವೆ. ಬರಗಾಲವನ್ನು ಸಂಪೂರ್ಣವಾಗಿ ನಿಲ್ಲಿಸುವುದಕ್ಕೆ, ಬರಗಾಲದಿಂದ ಜನರನ್ನು ಸಂಪೂರ್ಣವಾಗಿ ವಿಮುಕ್ತರನ್ನಾಗಿ ಮಾಡಲಿಕ್ಕೆ ಸರ್ಕಾರದಲ್ಲಿ ನಿರ್ದಿಷ್ಟವಾದ ಯಾವುದೇ ಕಾರ್ಯಕ್ರಮ ಕೂಡ ನಡೆದಿದೆ ಎನ್ನತಕ್ಕ ಭಾವನೆ ಯಾವ ಸದಸ್ಯರಲ್ಲೂ ಇಲ್ಲ, ಅಷ್ಟೇ ಅಲ್ಲ ತಮಗೂ ಇಲ್ಲವೆಂದು ಹೇಳಿದರೆ ಅದು ಅತಿಶಯೋಕ್ತಿ ಆಗಲಿಕ್ಕಿಲ್ಲ. ಬರಗಾಲ ಪರಿಸ್ಥಿತಿಯ ಬಗ್ಗೆ ನಾನು ಸದನದಲ್ಲಿ ಪ್ರಶ್ನೆಯನ್ನು ಹಾಕಿರುವಾಗ ಸುಮಾರು 15 ಜಿಲ್ಲೆಗಳು ಬರಗಾಲದಲ್ಲಿವೆ. ಅಲ್ಲಿರತಕ್ಕಂಥ ಜನರು ತೊಂದರೆಗೊಳಪಟ್ಟಿದ್ದಾರೆ ಎನ್ನತಕ್ಕ ಒಂದು ಉತ್ತರವನ್ನು ಸರ್ಕಾರ ಈಗಾಗಲೇ ನೀಡಿದೆ. ಆದರೆ ಬರಗಾಲದ ಹಿನ್ನೆಲೆಯನ್ನು ನೋಡಿದಾಗ ಬರಗಾಲ ಸಮಸ್ಯೆಯನ್ನು ನೋಡಿದಾಗ ಸಮಗ್ರವಾದಂಥ ಕಾರ್ಯಕ್ರಮ ಇಲ್ಲಿಯವರೆಗೆ ಯೋಜನಾ ಇಲಾಖೆಯಿಂದ ನಡೆದಿಲ್ಲ ಎನ್ನುವ ಪ್ರಶ್ನೆಯನ್ನು ಸಹ ನಾನು ಈ ದಿನ ಸದನದ ಗಮನಕ್ಕೆ ತಂದಿದ್ದೇನೆ. ಕರ್ನಾಟಕದಲ್ಲಿ ಬರಗಾಲ ನಿರ್ಮೂಲನ ಮಾಡಲಿಕ್ಕೆ ಯಾವ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೋ ಯಾವ ದೃಷ್ಟಿಯಿಂದ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೋ ಹಾಗೂ ಕುಡಿಯುವ ನೀರಿನ ಸಮಸ್ಯೆಯನ್ನು ಯಾವ ಒಂದು ಮಟ್ಟದಲ್ಲಿ ತೆಗೆದುಕೊಳ್ಳಬೇಕೋ